1990-91 ನೇ ಸಾಲಿನಲ್ಲಿ ಅರಣ್ಯದಲ್ಲಿ ಸತ್ತ ಆನೆಗಳ ಸಂಖ್ಯೆ

566-ಶ್ರೀ ಪಿ.ಜಿ.ಆರ್.ಸಿಂಧ್ಯ (ಕನಕಪುರ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1990-91ನೇ ಸಾಲಿನಲ್ಲಿ ರಾಜ್ಯದ ಅರಣ್ಯ ಪ್ರದೇಶಗಳಲ್ಲಿ ಸತ್ತಿರುವ ಆನೆಗಳಸಂಖ್ಯೆ ಎಷ್ಟು (ಜಿಲ್ಲಾವಾರು ಅಂಕಿ ಅಂಶಗಳನ್ನು ನೀಡುವುದು)

ಆ) ಅವುಗಳ ಸಾವಿಗೆ ಕಾರಣಗಳೇನು?

ಶ್ರೀ ಇ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು)

ಅ) 1990-91ನೇ ಸಾಲಿನಲ್ಲಿ ಅಂದರೆ ಜನವರಿ 1991 ತಿಂಗಳ ಕೊನೆವರೆಗೆ 40 ಆನೆಗಳು ಮೃತಪಟ್ಟಿರುತ್ತದೆ.

ಆ) ಅವುಗಳ ಮರಣಕ್ಕೆ ಕಾರಣಗಳನ್ನು ಈ ಕೆಳಕಂಡತೆ ನೀಡಲಾಗಿದೆ.

ಅನುಮಾನಾಸ್ಪದ ಖಾಯಿಲೆ	2
ಸ್ವಾಭಾವಿಕ ಮರಣ	19
ವಿದ್ಯುತ್ ಶಾಕ್	2
ಕಳ್ಳಬೇಟೆ	7
ಕಾಯಿಲೆಯಿಂದ	2

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯಲ್ಲಿ ದಿನಗೂಲಿಯಾಗಿ ಕೆಲಸ ಮಾಡುತ್ತಿರುವವರ ಸಂಖ್ಯೆ

588 - ಶ್ರೀ ಅಂಜನಾಮೂರ್ತಿ (ನೆಲಮಂಗಲ) : ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ದಿನಗೂಲಿ ನೌಕರರ ಸಂಖ್ಯೆ ಎಷ್ಟು? (ತಾಲ್ಲೂಕುವಾರು, ಹೋಬಳಿವಾರು ಮಾಹಿತಿ ನೀಡತಕ್ಕದ್ದು)

2) ಆ ನೌಕರರಿಗೆ ಸರಿಯಾಗಿ ಸಂಬಳ ಕೊಡುತ್ತಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ? ಹಾಗಿದ್ದಲ್ಲಿ ಸರ್ಕಾರ ಏನು ಕ್ರಮ ಕೈಗೊಂಡಿದೆ.

3) ಕೆಲವು ಅಧಿಕಾರಿಗಳು 4-5 ವರ್ಷಗಳ ಕಾಲ ದಿನಗೂಲಿ ಕೆಲಸಮಾಡಿದ ಹರಿ ಜನ ನೌಕರರನ್ನು ಕೆಲಸದಿಂದ ವಿನಾಕಾರ್ಣಣ ತೆಗೆದುಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ (ನೆಲಮಂಗಲ ತಾಲ್ಲೂಕಿನಲ್ಲಿ)

4) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಏನು ಕ್ರಮಕೈಗೊಂಡಿದೆ.

ಶ್ರೀ ಇ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಸಚಿವರು) :

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಒಟ್ಟು ದಿನಗೂಲಿ ನೌಕರರ ಸಂಖ್ಯೆ 297.

ತಾಲ್ಲೂಕುವಾರು ಮಾಹಿತಿ

1. ಕನಕಪುರ	-	84
2. ಚೆನ್ನಪಟ್ಟಣ	-	25
3. ಹೊಸಕೋಟಿ	-	27
4. ದೇವನಹಳ್ಳಿ	-	16

5. ದೊಡ್ಡ ಬಳ್ಳಾಪುರ - 49
6. ನೆಲಮಂಗಲ - 47
7. ರಾಮನಗರ - 28
8. ಮಾಗಡಿ - 21

ಆ) ಅಂತಹ ಪ್ರಕರಣಗಳು ಯಾವುದೂ ಇಲ್ಲ.

ಇ) ಇಂತಹ ಪ್ರಕರಣಗಳು ಇರುವುದಿಲ್ಲ

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಬ್ರಹ್ಮಾವರದಲ್ಲಿ ಕಟ್ಟಿಗೆ ಡಿಪೋ ಕುರಿತು

632 - ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕಿನಲ್ಲಿ ಸಾರ್ವಜನಿಕರಿಗೆ ಯಾವ ಯಾವ ಸ್ಥಳಗಳಲ್ಲಿ ಸರ್ಕಾರಿ ಕಟ್ಟಿಗೆ ಡಿಪೋ ಅನುಕೂಲತೆ ಲಭ್ಯವಿರುತ್ತದೆ.

ಆ) ಬ್ರಹ್ಮಾವರದ ಪರಿಸರದಲ್ಲಿ ಸಾರ್ವಜನಿಕರಿಗೆ ಉರುವಲು ಕಟ್ಟಿಗೆ ಅಭಾವ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಅಲ್ಲಿ ಕಟ್ಟಿಗೆ ಡಿಪೋ ಸ್ಥಾಪಿಸುವ ವಿಚಾರ ಸರ್ಕಾರದ ಗಮನದಲ್ಲಿದೆಯೇ?

ಈ) ಹಾಗಿದ್ದಲ್ಲಿ ಅದನ್ನು ಯಾವಾಗ ಸ್ಥಾಪಿಸಲಾಗುವುದು?

ಶ್ರೀ ಇ.ಟಿ. ಶಂಭುನಾಥ್ (ಅರಣ್ಯ ರಾಜ್ಯ ಮಂತ್ರಿಗಳು) :

ಅ) ಉಡುಪಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಒಂದು ಸರ್ಕಾರಿ ಕಟ್ಟಿಗೆ ಡಿಪೋ ಇರುತ್ತದೆ.

ಆ) ಬಂದಿದೆ.

ಇ) ಈ ಕೆಳಕಂಡ ಕಾರಣಗಳಿಂದ ಬ್ರಹ್ಮಾವರದಲ್ಲಿ ಕಟ್ಟಿಗೆ ಡಿಪೋ ಸ್ಥಾಪಿಸುವ ವಿಚಾರ ಸರ್ಕಾರವು ಪರಿಗಣಿಸುತ್ತಿಲ್ಲ ಅರಣ್ಯ ವೃಕ್ಷ ಸಂರಕ್ಷಣಾ ಕಾಯಿದೆಯ ಪ್ರಕಾರ ಹಿಡುವಳಿದಾರರು 5 ಟನ್ ಸೌದೆ ಪೂರ್ವಾನುಮತಿ ಇಲ್ಲದೆ ಸ್ವಂತ ಉಪಯೋಗಕ್ಕೆ ಕಡಿಯಲು ಅವಕಾಶವಿರುವುದರಿಂದ, ಮತ್ತು ದರಖಾಸ್ತು ಮತ್ತು ಇತರ ಕಾರಣಗಳಿಂದ ಮರಗಳ ಕಡಿತಲೆಯಾಗಿ ಆದರಿಂದ ಬರುವ ಸೌದೆ ಮಾರುಕಟ್ಟೆಗೆ ಬರುತ್ತಿರುವುದರಿಂದ ಹಾಗೂ ಈಗಿನ ಸರ್ಕಾರದ ಅರಣ್ಯ ಸಂರಕ್ಷಣಾ ನೀತಿಯ ಪ್ರಕಾರ ಕಾದಿಟ್ಟ ಅರಣ್ಯ ಪ್ರದೇಶದಿಂದ ಹಸಿ ಮರಗಳನ್ನು ಕಡಿಯುವುದು ಸಂಪೂರ್ಣ ನಿಷೇಧಿಸಲ್ಪಟ್ಟು ಕೇವಲ ಸತ್ತು ಬಿದ್ದ ಮರಗಳನ್ನು ಮಾತ್ರ ಅರಣ್ಯ ಪ್ರದೇಶಗಳಿಂದ ಡಿಪೋಗಳಿಗೆ ತರುತ್ತಿರುವುದರಿಂದ ಉರುವಲು ಕಟ್ಟಿಗೆ ಉತ್ಪಾದನೆ ಅತ್ಯಂತ ಕಡಿಮೆಯಾಗಿ ಬ್ರಹ್ಮಾವರದಲ್ಲಿಯೇ ಆಗಲಿ ಅಥವಾ ಇನ್ನಿತರ ಸ್ಥಳಗಳಲ್ಲಿಯೇ ಆಗಲಿ ಹೊಸ ಸೌದೆ ಡಿಪೋಗಳನ್ನು ತೆರೆಯುವ ವಿಚಾರವು ಸರ್ಕಾರ ಪರಿಶೀಲಿಸುತ್ತಿಲ್ಲ.

ಆಹಾರ ಮತ್ತು ನಾಗರೀಕ ಪೂರೈಕೆ ಬಗ್ಗೆ

646 - ಶ್ರೀ ಸಿ.ಎಂ. ಲಿಂಗಪ್ಪ (ರಾಮನಗರ) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು.ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಆಹಾರ ಪದಾರ್ಥಗಳನ್ನು ನ್ಯಾಯಬೆಲೆ ಅಂಗಡಿಗಳ ಮೂಲಕ ವಿತರಣೆ ಮಾಡಿಸುತ್ತಿರುವದರಿಂದ ಸಾಕಷ್ಟು ದುರುಪಯೋಗವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?